


ಗುಂಡ ಪಾರ್ಕಿಗೆ ಬಂದಿದ್ದಾಗ ಅಲ್ಲಿ ಸೀಬೆ ಹಣ್ಣೊಂದನ್ನು ಖರೀದಿಸಿದ.

ಮಾರಾಟಗಾರ: ಹಣ್ಣನ್ನು ನಾಲ್ಕು ಭಾಗ ಮಾಡಬೇಕೋ ಅಥವಾ ಎರಡು ಭಾಗ ಮಾಡಬೇಕೋ?

ಗುಂಡ: ನನ್ನ ಕೈಲಿ ನಾಲ್ಕು ಭಾಗ ತಿನ್ನೋಕೆ ಆಗೋಲ್ಲ. ಎರಡು ಭಾಗ ಆದರೆ ಸಾಕು.

***

ಹೊಸದಾಗಿ ಕಾರು ಖರೀದಿಸಿದ್ದ ಮಾಲಿನಿ, ಸಿಂಗಾರ ಮಾಡಿಕೊಂಡು ಕಾರನ್ನು ರಸ್ತೆಗೆ ಇಳಿಸಿದಳು. ವೇ ಇದ್ದರೆ ಸಾಕು ಅದು ಒನ್ ವೇ ಆದರೂ ಅಡ್ಡಿಯಿಲ್ಲ ಎಂದು ಕಾರು ಚಲಾಯಿಸಿದಳು. ಅದು ಪೊಲೀಸಿನವನ ಕಣ್ಣಿಗೆ ಬಿದ್ದು, ಸೀಟಿ ಊದಿದ. ಕಾರು ನಿಲ್ಲಿಸಲಿಲ್ಲ. ಕಡೆಗೂ ಹಿಂಬಾಲಿಸಿ ಕಾರನ್ನು ತಡೆದ.

ಮಾಲಿನಿ: ಕ್ಷಮಿಸಿ. ಬಹಳಷ್ಟು ಹುಡುಗರು ಡ್ರಾಪ್ ಕೇಳೋಕೆ ಶಿಳ್ಳೆ ಹೊಡೀತಾರೆ. ನೀವು ಅದೇ ರೀತಿ ಎಂದು ಭಾವಿಸಿದೆ ಒನ್ ವೇಯಲ್ಲಿ ಬಂದುಬಿಟ್ಟೆ. ಅವಳ ವೈಯಾರದಿಂದ ನುಲಿದಾಟಕ್ಕೆ ಖುಷಿಯಾದ ಪೊಲೀಸ್ ಆಕೆಯನ್ನು ಕ್ಷಮಿಸಿದ.

***

ಕಂಪನಿಯ ಬಾಸ್ ಗುಂಡನನ್ನು ಕರೆದು ರಿಪೋರ್ಟ್‌ನಲ್ಲಿರುವ ತಪ್ಪುಗಳ ಬಗ್ಗೆ ಕಾರಣ ಕೇಳಿದರು. ಅದಕ್ಕೆ ಗುಂಡ ವಿನೀತನಾಗಿ ಉತ್ತರಿಸಿದ.

ಗುಂಡ: ಏನ್ ಮಾಡೋದು ಸರ್, ನನ್ನ ನಾಲ್ವರು ಅಸಿಸ್ಟಂಟ್‌ಗಳು ಎಷ್ಟು ಮೂರ್ಖರಿದ್ದಾರೆ ನೋಡಿ.

ಬಾಸ್: (ಕೋಪದಿಂದ ತಲೆ ಎತ್ತಿ) ನೀನೇ ಅದೃಷ್ಟವಂತ ಕಣಯ್ಯ. ನನಗೆ ಐವರು ಮೂರ್ಖ ಅಸಿಸ್ಟಂಟ್‌ಗಳಿದ್ದಾರೆ. ಅದರಲ್ಲಿ ನೀನೂ ಒಬ್ಬ.

***

ಇಬ್ಬರು ಕಳ್ಳರು ಮಾತನಾಡುತ್ತಾ ಕುಳಿತಿದ್ದರು.

ಕಳ್ಳ 1: ಈಗಿನ ಕಾಲದಲ್ಲಿ ಕನಿಕರ ತೋರಿಸಿದರೆ ಬೇರೆಯವರು ಲಾಭ ಪಡೆಯುತ್ತಾರೆ.

ಕಳ್ಳ 2: ಯಾಕೆ ಮೋಸ ಹೋದೆಯಾ?

ಕಳ್ಳ 1: ಹೌದು, ರಾಮಣ್ಣನ ಮನೆಯಿಂದ ಒಂದು ಲಕ್ಷ ರೂಪಾಯಿ ಕಳ್ಳತನ ಮಾಡಿದೆ. ಆ ಹಣ ಆತನ ಹಾರ್ಟ್ ಆಪರೇಷನ್‌ಗೆಂದು ಇಟ್ಟಿದ್ದರಂತೆ. ವಿಷಯ ತಿಳಿದು ನಾನೇ ಹಣ ಹಿಂದಿರುಗಿಸಿದೆ.

ಕಳ್ಳ 2: ಭೇಷ್, ಮತ್ತೆ?

ಕಳ್ಳ 1: ಹಣ ಮತ್ತೆ ಸಿಗೋಲ್ಲ ಅಂತಿದ್ದ ರಾಮಣ್ಣ ಹಣ ಸಿಕ್ಕಿದ ಸಂತೋಷದಲ್ಲಿ ಹಾರ್ಟ್ ಅಟ್ಯಾಕ್ ಆಗಿ ನೆಗೆದು ಬಿದ್ದ. ಹಣ ಅವರ ಸಂಬಂಧಿಗಳ ಪಾಲಾಯಿತು.

ಸಂಗ್ರಹ: **ರಮೇಶ್ ಎಸ್.**

ಸ್ನೇಹಿತೆ: ಯಾಕ್ಲಾ ತಿಮ್ಮ, ನಿನ್ನ ಕೆನ್ನೆ ಪೂರಿಯಂತೆ ಊದಿಕೊಂಡಿದೆ?

ತಿಮ್ಮ: ಇಂಗ್ಲಿಷ್ ಮಾತನಾಡಿದ್ದರ ಪ್ರತಿಫಲವಿದು.

ಸ್ನೇಹಿತೆ: ಹೌದಾ? ಯಾವ ರೀತಿ ಇಂಗ್ಲಿಷ್ ಮಾತನಾಡಿದೆ?

ತಿಮ್ಮ: ಬೆಳಿಗ್ಗೆ ಶಾಲೆಗೆ ಹೋಗಿದ್ದಾಗ 3ನೇ ತರಗತಿಯ ಮಿಸ್ ಎದುರಾದ್ರಾ. ಅವರನ್ನು 'ಗುಡ್ ಮಾರ್ನಿಂಗ್ ಥರ್ಡ್ ಕ್ಲಾಸ್ ಟೀಚರ್' ಎಂದು ವೆಲ್‌ಕಮ್ ಮಾಡ್ದೆ ಅಷ್ಟೆ. ಅಷ್ಟಕ್ಕೆ ಹೀಗೆ ಮಾಡವ್ರೆ.

ಸ್ನೇಹಿತೆ: ಅವರು ಪೂರಿ ಮಾಡವ್ರೆ, ನಾನಾಗಿದ್ದಿದ್ರೆ ಕೊಂದೇ ಬಿಡ್ತಿದ್ದೆ.

***

ನಿರೂಪಕಿ: ಹಾಯ್ ಮಿಸ್ಟರ್ ಸಿಟಿಜನ್. ನಿಮ್ಮ ಆರ್ಥಿಕ ಸ್ಥಿತಿ ಹೇಗಿದೆ?

ಮಿಸ್ಟರ್ ಸಿಟಿಜನ್: ನಮ್ಮವರಿಗೆ ಯಾವುದೇ ಸಮಸ್ಯೆ ಇಲ್ಲ. ನನ್ನ ಪೂರ್ವಜರು ಏಳು ತಲೆಮಾರುಗಳಿಗೆ ಸಾಕಾಗುವಷ್ಟು ಹಣ ಸಂಪಾದಿಸಿದ್ದಾರೆ. ನನ್ನ ಆರ್ಥಿಕ ಸ್ಥಿತಿಗತಿಯೇ ಚೆನ್ನಾಗಿಲ್ಲ.

ನಿರೂಪಕಿ: ಓಹ್! ತುಂಬಾ ಒಳ್ಳೆಯದು. ನಿಮ್ಮ ಸ್ಥಿತಿ ಯಾಕೆ ಹೀಗಾಯಿತು?

ಮಿಸ್ಟರ್ ಸಿಟಿಜನ್: ಯಾಕೆಂದರೆ ನಾನು ಎಂಟನೇ ತಲೆಮಾರಿಗೆ ಸೇರಿದವನು.

***

ನೌಕರ: ಸರ್, ಸ್ಕೂಟರ್ ಚಾಲನೆ ಮಾಡುವಾಗ ಅಪಘಾತವಾಗಿ ಬಲಗಣ್ಣು ಕಳೆದುಕೊಂಡಿದ್ದೇನೆ. ಹೀಗಾಗಿ, ಮಾಸಿಕ ಅಂಗವಿಕಲ ಭತ್ಯೆ ಮಂಜೂರು ಮಾಡುವಂತೆ ನಿಮ್ಮನ್ನು ವಿನಂತಿಸುತ್ತೇನೆ.

ಅಧಿಕಾರಿ: ಕಂಪನಿಯ ನಿಯಮಗಳ ಪ್ರಕಾರ, ಯಾವುದೇ ಉದ್ಯೋಗಿ ಎರಡೂ ಕಣ್ಣುಗಳನ್ನು ಕಳೆದುಕೊಂಡರೆ ಮಾತ್ರ ಅಂಗವಿಕಲ ಭತ್ಯೆಗೆ ಅರ್ಹತೆ ಪಡೆಯುತ್ತಾರೆ. ಆಯ್ಕೆ ನಿಮ್ಮದು.

***

ಮಗಳು: ಅಪ್ಪ, ಅಮ್ಮ ಆಸ್ಪತ್ರೆಯಿಂದ ಎರಡು ಮಕ್ಕಳನ್ನು ತಂದಿದ್ದಾರೆ.

ಅಪ್ಪ: ಹೌದು. ಅವರಿಬ್ಬರು ಅವಳಿ ಜವಳಿ.

ಮಗಳು: ಹೌದಾ? ಒಂದನ್ನು ಖರೀದಿಸಿದ್ರೆ, ಇನ್ನೊಂದು ಉಚಿತ ಕೊಡ್ತಾರಲ್ಲ? ಅದೇ ರೀತಿನಾ ಅಪ್ಪ?

***

ಅಭ್ಯರ್ಥಿ: ಮಾರ್ಕೆಟಿಂಗ್ ಮ್ಯಾನೇಜರ್ ಹುದ್ದೆಗೆ ಸಂದರ್ಶನಕ್ಕೆ ಬಂದಿದ್ದೇನೆ.

ಸಂದರ್ಶಕ: ಈಗ ನೀವು ಏನು ಮಾಡುತ್ತಿದ್ದೀರಿ?

ಅಭ್ಯರ್ಥಿ: ನಿಮ್ಮ ಕಂಪನಿಯಲ್ಲಿ ತಾತ್ಕಾಲಿಕವಾಗಿ ಜೂನಿಯರ್ ಅಸಿಸ್ಟೆಂಟ್ ಆಗಿ ಕೆಲಸ ಮಾಡ್ತಿದ್ದೀನಿ.

ಸಂದರ್ಶಕ: ಸರಿ. ನೀವು ಹೋಗಬಹುದು. ಜೂನಿಯರ್ ಅಸಿಸ್ಟೆಂಟ್ ಆಗಿಯೇ ನಿಮ್ಮ ಕೆಲಸ ದೃಢೀಕರಿಸಲ್ಪಟ್ಟಿದೆ.

***

ಗಂಡ: ಹೆಂಡತಿಯರು ಮಾತ್ರ ಮನೆಯಲ್ಲಿ ಅಡುಗೆ ಮಾಡುವುದು ಏಕೆ?

ಹೆಂಡತಿ: ಜಿನೀವಾ ಸಮಾವೇಶದ ಪ್ರಕಾರ, ಎಲ್ಲಾ ಕೈದಿಗಳಿಗೆ ಆಹಾರವನ್ನು ನೀಡಬೇಕು. ಆದ್ದರಿಂದ, ಹೆಂಡತಿಯರು ಮನೆಯಲ್ಲಿ ಅಡುಗೆ ಮಾಡುತ್ತಾರೆ.

***

ಸಹಾಯಕ: ಗಂಡ ಕುಟುಂಬದ ಮುಖ್ಯಸ್ಥನಾಗಿದ್ದರೆ, ಹೆಂಡತಿಯ ಪಾತ್ರವೇನು?




ಬಾಸ್: ಗಂಡ ಕುಟುಂಬದ ಮುಖ್ಯಸ್ಥನಾಗಿದ್ದರೆ, ಹೆಂಡತಿ ಕತ್ತು ಇದ್ದಂತೆ. ಅವಳು ಅವನ ತಲೆಯನ್ನು ಯಾವುದೇ ಮೂಲೆಗೆ 360 ಡಿಗ್ರಿಗೆ ತಿರುಗಿಸುವ ಸಾಮರ್ಥ್ಯ ಹೊಂದಿರುತ್ತಾಳೆ.

ಸಂಗ್ರಹ: ಶ್ರೀಕಂಠೇಶ್ವರ ಎಸ್., ಬೆಂಗಳೂರು